**1 ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**
**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 441/2023**

| ಪಿರ್ಯಾದುದಾರರು : | ವಿರುದ್ಧ | ಆರೋಪಿತರು: |
|---|---|---|
| ಚನ್ನಗಿರಿ ಪೊಲೀಸ್ ಠಾಣೆ | | ಎ 1. ತಿಪ್ಪೇಸ್ವಾಮಿ<br>ಬಿನ್ ಭೀಮಪ್ಪ<br>ವಯಸ್ಸುಃ 57 ವರ್ಷ,<br><br>ಎ 2. ಸುನಿಲ್<br>ಬಿನ್ ಕರಿಯಪ್ಪ<br>ವಯಸ್ಸುಃ 25 ವರ್ಷ,<br>ಇಬ್ಬರ ವಾಸಃ ಮೇಳನಾಯಕನಕಟ್ಟೆ ಗ್ರಾಮ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ. |

**ದೋಷಾರೋಪಣೆ**

ನಾನು **ಕುಃ ಶಮ ಶ್ರೀವತ್ಸ**, 1 ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಮೊದಲನೇಯದಾಗಿ ದಿಃ07.10.2022 ರಂದು ಮಧ್ಯಾಹ್ನ 2.00 ಗಂಟೆಯ ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಚಿರಡೋಣಿ ಗ್ರಾಮ ಸರ್ವೆ ನಂಃ 26/08 ರ ಜಮೀನಿನಲ್ಲಿ ಚಾ.ಸಾ 1,4 ಮತ್ತು 5 ರವರು ಜಮೀನಿಗೆ ಹೋದಾಗ ಆರೋಪಿತರಾದ ನೀವುಗಳು ಚಾ.ಸಾ 1,4 ಮತ್ತು 5 ರವರನ್ನು ಅಡ್ಡಗಟ್ಟಿ ತಡೆದು ನಿಲ್ಲಿಸುವ ಮೂಲಕ ಭಾ.ದಂ.ಸಂ.ಕಲಂ 341 ಸಹ ಕಲಂ 34 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ, ದಿನಾಂಕದಂದು 1 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾ.ಸಾ 14 ಮತ್ತು 5 ರವರಿಗೆ ಏನೋ ಸೂಳೇ ಮಗನೇ ಏನಲೇ ನಿಮ್ಮದ್ದು ಈ ಜಮೀನು ನಮ್ಮದು ಎಂದು ಅವಾಚ್ಯ ಶಬ್ದಗಳಿಂದ ನಿಂದಿಸುವ ಮೂಲಕ ಭಾ.ದಂ.ಸಂ.ಕಲಂ 504 ಸಹ ಕಲಂ 34 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ, ದಿನಾಂಕದಂದು ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾ.ಸಾ 1, 4 ಮತ್ತು 5 ರವರಿಗೆ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡುವ ಮೂಲಕ ಮೂಲಕ ಭಾ.ದಂ.ಸಂ.ಕಲಂ 323 ಸಹ ಕಲಂ 34 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ, ದಿನಾಂಕದಂದು ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾ.ಸಾ ,4 ಮತ್ತು 5 ರವರಿಗೆ ಕೊಲೆ ಬೆದರಿಕೆ ಹಾಕುವ ಮೂಲಕ ಭಾ.ದಂ.ಸಂ.ಕಲಂ 506 ಸಹ ಕಲಂ 34 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ.
ದಿನಾಂಕ:

Sd/-

**( ಕುಃ ಶಮ ಶ್ರೀವತ್ಸ)**
**1 ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**